



ಸೈನಾ ನೆಹ್ವಾಲ್
ಬ್ಯಾಡ್ಮಿಂಟನ್



ಪದಕದೊಂದಿಗೆ
ನಯನಾ ಕೊಕರೆ

ಕ್ರೀಡಾಪಟುಗಳನ್ನು ಪೋಷಿಸಿ ಬೆಳೆಸಬೇಕಾದ ಭಾರತ ಕ್ರೀಡಾ ಪ್ರಾಧಿಕಾರದ ವ್ಯಾಪ್ತಿಯಲ್ಲಿಯೇ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳು ವರದಿಯಾಗಿವೆ. 2010ರಿಂದ 2019ರ ಅವಧಿಯಲ್ಲಿ 24 ಎಸ್ಎಐಗಳಲ್ಲಿ 45 ಪ್ರಕರಣಗಳು ವರದಿಯಾಗಿದ್ದವು. ಅದರಲ್ಲಿ 29 ಕೋಚ್‌ಗಳ ಮೇಲೆ ದೂರುಗಳು ದಾಖಲಾಗಿದ್ದವು. ಈ ಪೈಕಿ ಐವರು ಕೋಚ್‌ಗಳಿಗೆ ಸಂಬಳ ಕಡಿತದ ಶಿಕ್ಷೆ ನೀಡಲಾಗಿತ್ತು. ಇಬ್ಬರು ಕೋಚ್‌ಗಳ ಗುತ್ತಿಗೆಯನ್ನು ರದ್ದು ಮಾಡಲಾಗಿತ್ತು. ಒಬ್ಬ ಕೋಚ್ ಸಸ್ಪೆಂಡ್ ಆಗಿದ್ದರೆ, ಐವರು ಖುಲಾಸೆಯಾಗಿದ್ದರು. ಒಬ್ಬ ಕೋಚ್ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಲೋಕಸಭೆಗೆ ಸಲ್ಲಿಸಿದ್ದ ವರದಿಯನ್ನು ಮೂರು ವರ್ಷದ ಹಿಂದೆ ಫೈನಾನ್ಷಿಯಲ್ ಎಕ್ಸ್‌ಪ್ರೆಸ್ ವೆಬ್‌ಸೈಟ್ ವರದಿ ಮಾಡಿತ್ತು.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್) ಅಧ್ಯಕ್ಷರಾಗಿದ್ದ ಬ್ರಿಜ್ ಭೂಷಣ್ ಶರಣ್‌ಸಿಂಗ್ ಅವರು ಮತ್ತು ಕೋಚ್‌ಗಳು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪಗಳು ದೊಡ್ಡಮಟ್ಟದಲ್ಲಿ ಸದ್ದು ಮಾಡಿದವು. ಅವರ ವಿರುದ್ಧ ಒಲಿಂಪಿಯನ್ ಸಾಕ್ಷಿ ಮಲೀಕ್, ವಿನೇಶ್ ಫೋಗಟ್ ಸೇರಿದಂತೆ ಹಲವು ಖ್ಯಾತನಾಮ ಕುಸ್ತಿಪಟುಗಳು ಬೀದಿಗಿಳಿದು ಧರಣಿ ನಡೆಸಿದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇದು ದೊಡ್ಡ ಸದ್ದು ಮಾಡಿತು. ಕುಸ್ತಿ ಫೆಡರೇಷನ್ ಅಂತರರಾಷ್ಟ್ರೀಯ ಮಾನ್ಯತೆ ಕಳೆದುಕೊಂಡಿತು. ಆರೋಪಿಯು ಸರ್ಕಾರದಲ್ಲಿ ಪ್ರಭಾವಿ ಸಂಸದನಾಗಿದ್ದ ಕಾರಣಕ್ಕೇ ಬಂಧನ ಮತ್ತು ಶಿಕ್ಷೆಗೊಳಗಾಗುವುದು ತಪ್ಪಿತು. ಪ್ರಕರಣ ಇನ್ನೂ ನ್ಯಾಯಾಲಯದಲ್ಲಿದೆ.

ಇಂತಹ ಸ್ಥಿತಿ ಭಾರತದಲ್ಲಿ ಅಷ್ಟೇ ಅಲ್ಲ. ಯುರೋಪ್, ಅಮೆರಿಕಗಳಲ್ಲಿಯೂ ಇದೆ. ಒಲಿಂಪಿಯನ್ ಜಿಮ್ನಾಸ್ಟ್ ಸಿಮೊನ್ ಬೈಲ್ಸ್ ಪ್ರಕರಣ ಇದಕ್ಕೆ ಉದಾಹರಣೆ. ತಂಡದ ವೈದ್ಯನೇ ಹಲವು ಜಿಮ್ನಾಸ್ಟ್‌ಗಳ ಮೇಲೆ ಎಸಗಿದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ. ಬೈಲ್ಸ್ ಮತ್ತು ಜಿಮ್ನಾಸ್ಟ್‌ಗಳು ಕೋರ್ಟ್‌ನಲ್ಲಿ ತಮ್ಮ ಮೇಲೆ ಆದ ಕಿರುಕುಳವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದರು. ಕೇಳಿದವರು ಬೆಚ್ಚಿಬಿದ್ದಿದ್ದರು. ಕೊನೆಗೂ ಆರೋಪಿಗೆ ಶಿಕ್ಷೆಯಾಗಿತ್ತು.

‘ನಾನು ಲ್ಯಾರಿಯನ್ನು ಖಂಡಿಸುವಷ್ಟೇ, ಇಡೀ ವ್ಯವಸ್ಥೆಯನ್ನೂ ದೂಷಿಸುತ್ತೇನೆ. ಅವನ ವಿಕೃತ ಕಾರ್ಯಗಳಿಗೆ ಕಡಿವಾಣ ಹಾಕದ ವ್ಯವಸ್ಥೆಗೆ ಧಿಕ್ಕಾರ’ ಎಂದು 24 ವರ್ಷದ ಬೈಲ್ಸ್ ಆಕ್ರೋಶ ವ್ಯಕ್ತಪಡಿಸಿದ್ದರು. ಭಾರತದಲ್ಲಿಯೂ ಇಂತಹ ಪ್ರಕರಣಗಳಲ್ಲಿ ತ್ವರಿತ ಮತ್ತು ಪ್ರಾಮಾಣಿಕವಾದ ನ್ಯಾಯ ನೀಡುವ ವ್ಯವಸ್ಥೆ ಬೆಳೆಯಬೇಕು. ಹೊಸ ಕ್ರೀಡಾ ಕಾಯಿದೆಯಿಂದಲಾದರೂ ಇದು ಸಾಧ್ಯವೇ?

ಇಷ್ಟೇ ಅಲ್ಲ. ಹೆಣ್ಣುಮಕ್ಕಳು ಕ್ರೀಡೆಗಳಲ್ಲಿ ಎದುರಿಸುವ ಇನ್ನೂ ಹಲವಾರು ಸಮಸ್ಯೆಗಳಿವೆ. ವಸ್ತ್ರಸಂಹಿತೆ, ಧರ್ಮ, ಜಾತಿ ತಾರತಮ್ಯ, ಸಂಭಾವನೆ, ಪ್ರಶಸ್ತಿ ಮೊತ್ತಗಳ ನೀಡುವಿಕೆಯಲ್ಲಿ ತಾರತಮ್ಯಗಳೂ ಪ್ರಮುಖವಾಗಿವೆ. ಅಷ್ಟೇ ಅಲ್ಲ. ಎಷ್ಟೋ ಹೆಣ್ಣುಮಕ್ಕಳು ಮದುವೆ, ಮಕ್ಕಳು ಆದ ನಂತರ ಕ್ರೀಡೆಗೆ ಮರಳುವುದು ದುಸ್ತರ.

ಟೆನಿಸ್ ತಾರೆ ಸಾನಿಯಾ ಮಿರ್ಜಾ ಅವರ ವೃತ್ತಿಜೀವನವನ್ನೇ ತೆಗೆದುಕೊಂಡು ನೋಡಿ. ಈ ಎಲ್ಲ ತರತಮಗಳೂ ಕಾಣಸಿಗುತ್ತವೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅಮೋಘ ಆಟವಾಡಿದ್ದ ಭಾರತ ಮಹಿಳಾ ತಂಡದ ವಂದನಾ ಕಟಾರಿಯಾ ಅವರ ಮನೆ ಎದುರು ಪುಂಡರು ಗಲಾಟೆ ಮಾಡಿ ಜಾತಿನಿಂದನೆ ಮಾಡಿದ್ದನ್ನು ಮರೆಯಲು ಸಾಧ್ಯವೇ? ಇತ್ತೀಚೆಗೆ ಇಂದೋರ್‌ನಲ್ಲಿ ಆಸ್ಟ್ರೇಲಿಯಾ ಮಹಿಳಾ ತಂಡದ ಆಟಗಾರ್ತಿಯರಿಗೆ ಕೆಲವು ಕಿಡಿಗೇಡಿಗಳು ಕಿರುಕುಳ ನೀಡಿದ್ದರು. ಆ ಸಂದರ್ಭದಲ್ಲಿ ರಾಜಕಾರಣಿಯೊಬ್ಬರು ನೀಡಿದ್ದ ಅಸಂಬದ್ಧ ಹೇಳಿಕೆಯು ಟೀಕೆಗೆ ಒಳಗಾಗಿತ್ತು. ‘ಹೆಣ್ಮಕ್ಕಳೇ ಎಚ್ಚರದಿಂದರಬೇಕು’ ಎಂದು ಹೇಳುವುದು ಪುರುಷ ಅಹಂಕಾರದ ಪರಮಾವಧಿಯೇ ಸರಿ. ಸಮಾಜದ ಮನಸ್ಥಿತಿ ಬದಲಾಗದೇ ಇರುವುದೇ ಇದಕ್ಕೆ ಕಾರಣ.

ಈ ಬದಲಾವಣೆಗಳು ಮನೆಯೊಳಗಿನಿಂದಲೇ ಆರಂಭವಾಗಬೇಕು. ಶಾಲೆ, ಕಾಲೇಜುಗಳಲ್ಲಿ ಶಿಕ್ಷಕರು, ಆಡಳಿತ ಮಂಡಳಿಗಳು ಹೆಣ್ಣುಮಕ್ಕಳ ಕುರಿತು ಹುಡುಗರಲ್ಲಿ ಗೌರವ ಭಾವನೆಯನ್ನು ಮೂಡಿಸುವಂತಹ ಉಪಕ್ರಮಗಳನ್ನು ತೆಗೆದುಕೊಳ್ಳುವುದು ಇಂದಿನ ತುರ್ತು. ಇದರಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಪಾತ್ರ ಬಹಳ ಮಹತ್ವದ್ದು. ಪ್ರತಿ ಶಾಲೆಯಲ್ಲಿಯೂ ಮಕ್ಕಳು ಹೆಚ್ಚು ಆತ್ಮೀಯವಾಗಿರುವುದೇ ದೈಹಿಕ ಶಿಕ್ಷಣ ಶಿಕ್ಷಕರೊಂದಿಗೆ ಎಂಬುದು ನಿಸ್ಸಂದೇಹ. ಮಹಿಳಾ ಕೋಚ್‌ಗಳ ನೇಮಕ ಮತ್ತು ಕಾನೂನುಗಳ ಅರಿವು ಮೂಡಿಸುವುದು ಮುಖ್ಯ. ಕುಟುಂಬ, ಸಮಾಜ ಮತ್ತು ಕ್ರೀಡಾ ವ್ಯವಸ್ಥೆ ಒಂದಕ್ಕೊಂದು ಪೂರಕವಾಗಿ ಹೆಜ್ಜೆ ಹಾಕಿದರೆ ಮಾತ್ರ ಮಹಿಳಾ ಕ್ರೀಡಾ ವಿಭಾಗವು ಮತ್ತಷ್ಟು ಹಸಿರಾಗುವುದು ಸಾಧ್ಯ.



ಅಶ್ವಿನಿ ನಾಚಪ್ಪ
ಅಥ್ಲೆಟಿಕ್ಸ್

